# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಕಬಂಧ ಮೋಕ್ಷ

ಕವಿ

## ಶ್ರೀಧರ ಡಿ. ಎಸ್.

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂಹೆಗಡೆ .ಎ .
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ.ಎಸ್ .**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ  ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಶ್ರೀಮದ್ರಾಮಾಯಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೧೪

**ಪಾತ್ರಗಳು:**

ವಿಶ್ವಾವಸು / ಕಬಂಧ, ಹಂಸ, ಗಂಧರ್ವಸ್ತ್ರೀಯರು, ಸ್ಥೂಲಶಿರ ಮುನಿ, ವಟುಗಳು, ದೇವೇಂದ್ರ, ದೇವದೂತರು, ಶ್ರೀರಾಮ, ಲಕ್ಷ್ಮಣ, ಜಟಾಯು

**ಕಥಾ ಸಾರಾಂಶ:**

ಶ್ರೀಮದ್ರಾಮಾಯಣದ ಅರಣ್ಯಕಾಂಡದಲ್ಲಿ ಬರುವ ಈ ಕತೆ ಪ್ರಸಿದ್ಧವಾದ ಆಖ್ಯಾನ. ಗಂಧರ್ವ ವಿಶ್ವಾವಸು ಸೌಂದರ್ಯಮದದಿಂದ ಸ್ಥೂಲಶಿರನ ಕೋಪಕ್ಕೆ, ಇಂದ್ರನ ಘಾತಕ್ಕೆ ಒಳಗಾಗಿ ಕಬಂಧನಾಗಿ - ಶ್ರೀರಾಮಕಾರುಣ್ಯದಿಂದ ಮೂಲಗಂಧರ್ವತ್ವಕ್ಕೆ ಮರಳುವುದು ಈ ಕತೆಯ ಹಂದರ. ಸ್ಥೂಲವಾದ ಈ ಕಥೆಯನ್ನು 'ರಂಗಕತೆ'ಯಾಗಿ ಮಾರ್ಪಡಿಸಿಕೊಂಡಿರುವುದು ಇಲ್ಲಿಯ ವೈಶಿಷ್ಟ್ಯ. ನೃತ್ಯ, ವನವಿಹಾರ, ಜಲಕ್ರೀಡೆ, ಬಣ್ಣದ ವೇಷದ ರಚನೆ ಇವುಗಳೆಲ್ಲಾ ಕಲ್ಪಿತಾಂಶಗಳು. ಈ ಹಿನ್ನೆಲೆಯಲ್ಲಿ 'ಹಂಸ' ಎಂಬ ಗೆಳೆಯನ ಪಾತ್ರವನ್ನು ಸೃಷ್ಟಿಸಿಕೊಳ್ಳಲಾಗಿದೆ.

ಯಕ್ಷಗಾನದ ವೈವಿಧ್ಯಮಯ ವೇಷಗಳಿಗೆ ಸಾಕಷ್ಟು ಅವಕಾಶವಿರುವ ಈ ಕಿರುಪ್ರಸಂಗ ನೃತ್ಯಪ್ರಧಾನವಾಗಿ ಆಕರ್ಷಕವಾಗಿರಲಿ ಎಂದು 'ರಂಗಕೃತಿ'ಯನ್ನು ಭಿನ್ನದೃಷ್ಟಿಯಿಂದ ರಚಿಸಿಕೊಳ್ಳಲಾಗಿದೆ. ವಿಶ್ವಾವಸು ಗಂಧರ್ವನು ಕಾಮರೂಪಶಕ್ತಿಯಿಂದ ರಾಕ್ಷಸನಾಗುವ ಮೂಲಕತೆಯನ್ನು 'ಹಂಸ'ನು ಬಣ್ಣದ ವೇಷ ಕಟ್ಟಿಕೊಟ್ಟಂತೆ ಚಿತ್ರಿಸಿದ್ದು ಯಕ್ಷಗಾನೀಯವಾಗಿಸುವ ಕೆಲಸ. ರಾಮಲಕ್ಷ್ಮಣರ ಪಾತ್ರಕ್ಕೆ ಮಹತ್ತ್ವ ಬರಬೇಕಿರುವ ಹಿನ್ನೆಲೆಯಲ್ಲಿ ಜಟಾಯುಮೋಕ್ಷದ ಪ್ರಕರಣವನ್ನು ಸೇರಿಸಿಕೊಳ್ಳಲಾಗಿದೆ.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು - ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಸುಮಾರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳ ರಚಯಿತ. ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ.ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, `ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರುಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ:**

ಶ್ರೀಮದ್ರಾಮಾಯಣದ ಈ ಕಥೆಯನ್ನು ಬಯಲಾಟ, ತಾಳಮದ್ದಲೆ ಎರಡೂ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ. ಹಲವು ತಾಳಮದ್ದಲೆಯಲ್ಲಿ ಯಶಸ್ವೀ ಪ್ರಯೋಗವೂ ಆಗಿದೆ. ಬಯಲಾಟದಲ್ಲಿ ಸೊಗಸಾದ ನಡೆಯುಳ್ಳ ಪ್ರಸಂಗವಾಗಿದ್ದು ಕಿರು ಅವಧಿಗೆ ಚೆನ್ನಾಗಿ ಹೊಂದುತ್ತದೆ. ಸಂಸ್ಕೃತ ನಾಟಕದ ವಿದೂಷಕ ತಂತ್ರವನ್ನು ಸುಸಂಸ್ಕೃತ ವಿನೋದಗಳೊಂದಿಗೆ ಇಲ್ಲಿ ಜೋಡಿಸಲಾಗಿದೆ. ಗಂಧರ್ವ ವಿಶ್ವಾವಸು ಸಹಜವಾಗಿ ಸಂಗೀತಾದಿ ಕಲಾನಿಪುಣನಿರುವುದರಿಂದ, ದೇವ ಸಭೆಯಲ್ಲೂ ಅದೇ ಉದ್ಯೋಗದವನಾದುದರಿಂದ ಇಲ್ಲಿ ಬರುವ ಹಂಸ ಎಂಬ ವಿದೂಷಕ ಪಾತ್ರ ಸುಸಂಸ್ಕೃತ ಪ್ರಯೋಗದ ಯಕ್ಷಗಾನಾಸಕ್ತರಿಗೆ ಅನುಕೂಲವಾಗಿ ಒದಗಿ ಬರುತ್ತದೆ. ಯಕ್ಷಗಾನದ ಬಣ್ಣದ ವೇಷವನ್ನಾಗಿ ಸುಂದರನಾದ ಕಥಾನಾಯಕನನ್ನು ಬದಲಿಸುವುದು, ನಾಯಕನೇ ಪ್ರತಿನಾಯಕನೂ, ಸುಂದರನೇ ಘೋರರೂಪಿಯಾಗುವುದು ಮುಂತಾದ ವಿಶಿಷ್ಟ ತಂತ್ರಗಳಿಂದ ಹೊಸ ರೀತಿಯ ಚಿಂತಕರಿಗೆ ಒಳ್ಳೆಯ ವಸ್ತು ಕಬಂಧ ಮೋಕ್ಷ. ಬಂಧ-ಮೋಕ್ಷಗಳೆಂಬ ಶಬ್ದಗಳೆರಡರ ಅರ್ಥ ಸೂಕ್ಷ್ಮವೂ ಗಮನಿಸಬೇಕಾದುದು.

# ಪ್ರಸಂಗ ಸಾಹಿತ್ಯ

**ನಾಂದಿ:**
**ಭಾಮಿನಿ**
ಒಳಗೆ ಬೆಳೆದಿಹ ಕೊಳೆಯ ತೊಳೆಯದೆ |
ಬಲವು ಚೆಲುವುಗಳುಳಿಯವೆಂಬುದ |
ನಿಳೆಗೆ ತಿಳಿಸಲ್ಕಿಳಿದು ಬೆಳಗುವ ಬೆಳಕಿಗೊಂದಿಸುತ ||
ಕಲೆಯ ಬೆಳೆಸಿದ ನೆಲಕೆ ಸಜ್ಜನ |
ಕುಲಕೆ ಪದ್ಧತಿಯುಳಿಸಿದರಿಗಾಂ |
ತಲೆಯ ಬಾಗಿ ಕಬಂಧಮೋಕ್ಷದ ಕಥೆಯ ಪೇಳುವೆನು || 1 ||

**ಕಾಂಬೋಧಿ - ಝಂಪೆ**
ದೇವ ಗಂಧರ್ವ ಪ್ರಾಧಾಕಶ್ಯಪಜನು ವಿ |
ಶ್ವಾವಸು ಕುಬೇರನಾತ್ಮೀಯ ||
ಕೋವಿದನು ಸಂಗೀತ ಸಾಹಿತ್ಯ ಕಲೆಗಳಲಿ |
ದೇವಸಭೆಯೊಳಗಿವನು ಮಾನ್ಯ || 1 ||
ರವಿಸೋಮತೇಜದಿಂ ಬೆಳಗುವತಿಸುಂದರಗೆ |
ದಿವದೊಳಾರಿಲ್ಲ ಸರಿಯಹರು ||
ಅವಿರತ ತಪೋಬಲಕೆ ದೀರ್ಘಾಯುವಿತ್ತ ವಿಧಿ |
ಇವಗೆ ಬಂದುದು ಬಿಂಕವದಕೆ || 2 || 3 ||

**ಝಿಲ್ಲಾನಿ - ಅಷ್ಟ**
ಗೆಳೆಯನೋರುವನಿಹ ಹಂಸ | ಜೊತೆ |
ಗೊಳುವನು ತಿಳಿದಿಹ ಕಲೆಗವತಂಸ ||
ಲಲಿತವಾಗ್ವಿದನು ಪ್ರಶಂಸ | ವಾದ್ಯ |
ಗಳ ನುಡಿಸಲು ಬಲ್ಲ ನಾಟ್ಯವಿದ್ವಾಂಸ || 1 ||
ಕರೆದ ಬಾರೈ ಹಂಸ ಗೆಳೆಯ | ನಾವು |
ತರತರ ವೈಭವ ಮೆರೆಸುವ ಪರಿಯ ||
ಅರುಹು ಗಂಧರ್ವಲೋಕದಲಿ | ಆವ |
ತೆರದೊಳೀ ಕಲೆ ಸೊಗಗೊಳುವುದೆನ್ನುತಲಿ || 2 ||
ಯಕ್ಷಗಾನವು ಮೊದಲಿರಲಿ | ಸರ್ವ |
ಪೇಕ್ಷೆಯ ಭರತನಾಟ್ಯವು ಮೇಳಗೊಳಲಿ ||
ಸೂಕ್ಷ್ಮಸಂವೇದಿ ಸಂಗೀತ | ಸುಖ |
ವೈ ಕ್ಷಣ ಕ್ಷಣಕು ರೂಪಕ ಮೇಳಗೀತ || 3 || 6 ||

**ಕಲ್ಯಾಣಿ - ರೂಪಕ**
ಗೆಳೆಯ ನಿನ್ನ ವಚನವುಚಿತವು | ಗಾಂಧರ್ವವೇದ |
ಒಲವನಿತ್ತು ಮೆರೆಸುತಿರುವುದು ||
ಕಲೆಯೆ ಸುಖದ ಸೆಲೆಗಳೈಸೆ |
ನೆಲೆಯು ಮುದಕೆ ಮನಕೆ ಸೊಗಸೆ |
ಸುಲಲಿತಾಂಗಿಯರನು ಕರೆಸು |
ಲಲಿತನಾಟ್ಯವೀಗ ನಡೆಸು || ಗೆಳೆಯ || 1 || 7 ||

**ವಾರ್ಧಕ**
ಕರೆಸಿದಂ ಗಾಯಕರ ನರ್ತಕರ ಮೇಳಗಳ |
ಪರಿಪರಿಯ ವಾದ್ಯವೈಚಿತ್ರ್ಯಮಹವೇಷಗಳ |
ಸುರರ ಸಂಪದದ ಸಿರಿ ಹೃದಯವಹ ಯಕ್ಷಲೋಕವ ಕಟ್ಟಿ ನಿಲ್ಲಿಸಲ್ಕೆ ||
ತರುಣಿಯರ ನಾಟ್ಯ ವಾದ್ಯಂಗಳ ಚಮತ್ಕಾರ |
ವರಸೆ ವರಸೆಯಲಿ ವಾದನದ ಕಲೆ ಕುಸುರಿಯಲಿ |
ಚರಣಗತಿಯಾಂಗಿಕಾಹಾರ್ಯಸಾತ್ವಿಕವಾಚಿಕಂಗಳಿಂ ರಂಜಿಸಿದರು || 1 || 8 ||

**ಭೈರವಿ - ತ್ರಿವುಡೆ**
ಮದನನೆತ್ತಿದ ಹೆದೆಯ ಹೂವೆನೆ ಮೃದುಮದಾಲಸಯಾನೆಯರ್ |
ಪದವಿಲಾಸದಿ ಹಂಸಗಜಮಂಡೂಕಗತಿಯೊಳಗಾಡಿದರ್ |
ಮೃದುಲ 'ಆಲೋಕಿತ' `ನಿಮೀಲಿತ' 'ಸಾಚಿ' 'ಸಮ' ದೃಷ್ಟಿಗಳೊಳು ||
ಚದುರೆಯರು ನವರಸವಿಲಾಸದೊಳಭಿನಯವ ವಿಧವಿಧದಿ ತೋರ್ದರು || 1 || 9 ||

**ಸಾರಂಗ - ಆದಿ - ಅಷ್ಟ**
ಬಾರೆ ಚಂದ್ರಿಕೆ ಕೋಮಲೆ | ಚಿತ್ರಾಕ್ಷಿಯೆ |
ಬಾರೆ ಚಂಪಕಶೋಭಳೆ | ವಿಹಾರಕೆ |
ನೀರೆ ಮೋಹಿನಿ ನೀನೇಳೆ ||
ಭೂರಮೆಯ ಸಿರಿ ಸೊಬಗನೀಕ್ಷಿಸಿ |
ವಾರಿಕೇಳಿಯನಾಡಿ ಸಗ್ಗವ |
ಸೂರೆಗೊಳ್ಳುತ ಕರೆವ ಗಿರಿವನ |
ಸೇರಿ ಸುಖಿಸುವ ಬನ್ನಿರೆಲ್ಲರು || ಬಾರೆ .....|| 1 || 10 ||

**ಸುರುಟಿ - ಏಕ**
ಪೊರಡೈ ಸಖಿ ಧರೆಗೆ | ಮೇಳದ |
ಪರಿಕರದಿಂ ಜೊತೆಗೆ ||
ಮುರಜಸುಝಲ್ಲರಿ ವೀಣಾತಾಲದ |
ಸ್ವರವರ ವಾದ್ಯಂಗಳ ಒಕ್ಕೂಟದಿ || 1 || 11 ||

**ಭಾಮಿನಿ**
ಗೆಳೆಯರೊಂದಾಗುತ್ತ ಪೊರಟರು |
ನಲಿನಮುಖಿಯರ ಬಳಗದೊಂದಿಗೆ |
ಇಳೆಯ ಕೊಳೆಯಂ ತೊಳೆವ ಪಾವನೆ ತ್ರಿಪಥಗಾಮಿನಿಯ ||
ಬಳಿಗೆ ಸಾರ್ದರು ಲಲಿತ ಮರ್ಮರ |
ಕಲರವದ ಕೂಜನವ ಕೇಳುತ |
ಸಲಿಲಕೇಳೀಮನದೊಳಿಳಿದರು ಭಾಮೆಯರು ನದಿಗೆ || 1 || 12 ||

**ಧನ್ಯಾಸಿ - ಏಕ**
ಧುಮ್ಮಿಕ್ಕಿ ನೀರಿಗೆ ಚಿಮ್ಮುತ ಮೇಲಕೆ |
ತಮ್ಮ ತಮ್ಮೊಳಗೆಳೆದಾsಡುತ ||
ಸುಮ್ಮನೆಯಡಗುತಲೆಳೆಯುತ ಕಾಲನು |
ದಮ್ಮುಕಟ್ಟಿಸಿ ಮುಳುಗೇsಳುತ ||
ಹೆಮ್ಮೆಯೊಳಗೆ ಹೊಯ್ದಾಡುತ ಪಿಡಿಯುತ |
ಮುಮ್ಮೊಗ ಹಿಮ್ಮೊಗ ತೇsಲುತ |
ಹೊಮ್ಮಿಸುತಲೆಗಳನೆರಚುತ ನೀರನು |
ಕೆಮ್ಮನೆ ಕೊಸರುತಲಾsಡುತ ||
ಆಡಿದರೂs ತೋಷದೊಳುs | ಜಲ |
ಕ್ರೀಡೆಯನುs ಸುದತಿಯರುs || 1 || 13 ||

**ಭಾಮಿನಿ**
ವಾರಿಕೇಳಿಯನಾಡಿ ನಾರೀ |
ವಾರಸಹ ವಿಹರಿಸುತ ಸೃಷ್ಟಿಯ |
ಪಾರಸಂಭ್ರಮ ಸವಿದು ಸೊಕ್ಕಿದ ಸಲಗದಂದದಲಿ ||
ಚಾರುತರದಿಂ ಮೆರೆವ ತರುಲತೆ |
ನೀರಝರಿ ಖಗಮೃಗವಿಲಾಸದಿ |
ಸೂರೆಗೊಂಡಿಹ ಸಗ್ಗದಂತಿರೆ ಬಂದ ಗಂಧರ್ವ || 1 || 14 ||

**ಟುಮರಿ - ರೂಪಕ**
ಚತುರೆಯರೆ ನೀವ್ ನೋಡಬನ್ನಿ |
ವಿತತ ವೈಭವ | ಜಗದ | ವಿತತ ವೈಭವ ||
ಸತತವೂ ವಸಂತ ಶರದ | ಋತುವಿಲಾಸವ || ಆಹಾ |
ಋತುವಿಲಾಸವ || ಚತುರೆ || 1 ||
ಸಲಿಲನಾರಿ ಬಳುಕಿ ಜಾರಿ |
ಬಳಸಿ ನಗವನು | ಇನಿಯ | ಬಳಸಿ ನಗವನು ||
ಇಳಿಯುತಪ್ಪಿಕೊಳುತಲಬ್ಬಿ |
ಗೊಳುತ ನೆಗೆವಳು | ಅಬ್ಬಿ | ಗೊಳುತ ನೆಗೆವಳು || 2 ||
ಗಗನಲೋಕ ಖಗವಿಲಾಸ |
ಬಗೆಗೆ ಹಬ್ಬವು | ಈ | ಜಗವೆ ಸಗ್ಗವು ||
ಮಿಗಗಳಾಟ ಮಿಲನ ಬೇಟ |
ಉಗುವ ಬುಗ್ಗೆಯು | ಸೊಗವ | ಉಗುವ ಬುಗ್ಗೆಯು || ಚತುರೆಯರೆ....|| 3 || 17 ||

**ಭಾಮಿನಿ**
ದೋಷರಹಿತವಿಲಾಸದೈಸಿರಿ |
ಯಾ ಸೊಬಗಿನಾಸರೆಯ ಸುಖವ |
ನ್ನೋಸರಿಸಿ ಋಷ್ಯಾಶ್ರಮಂಗಳ ಮಂಗಳದ ಮಹಿಗೆ ||
ತೋಷದಿಂದೈತರಲು ವೇದದ |
ಘೋಷವಾಲಿಸಿ ಭೂಸುರರು ಜಡ |
ವೇಷಿಗರು ರಸಲೇಶರಹಿತರೆನುತ್ತ ನಗುತೆಂದ || 1 || 18 ||

**ಸೌರಾಷ್ಟ್ರ - ತ್ರಿವುಡೆ**
ನೋಡು ಹಂಸನೆ ಜರಡು ವಟುಗಳ |
ಪಾಡ ಕೌಪೀನದ ಕುಚೇಲರ |
ಆಡುವೀ ಎಳೆ ತನುವನೊಣಗಿಪ | ಮೂಢರನ್ನು || 1 ||
ಸರಸಸುಖಸಂಗೀತವರಿಯದ |
ಬರಡುಗುರುಗಳ ಚರಟ ಚಟ್ಟರು |
ಕರಕರೆಯ ವೇದಾಂತಭ್ರಾಂತರು | ಮರುಳರೈಸೆ || 2 || 20 ||
(ಚಟ್ಟ = ಛಾತ್ರ, ವಿದ್ಯಾರ್ಥಿ)

**ಕೇದಾರಗೌಳ - ಅಷ್ಟ**
ಅಪಹಾಸ್ಯ ತರವಲ್ಲ ತಪಸಿಗಳಿವರಯ್ಯ |
ಜಪನಿಷ್ಠೆ ನಿಯಮದಿಂದ ||
ವಿಪುಲ ಪುಣ್ಯಾರ್ಜನೆ ಗೈದುದರಿಂ ಲೋಕ |
ಉಪಕೃತಮಾಗಿಹುದು || 1 ||
ಬದುಕದ ಸಾಯದ ಬಡಜೋಗಿಗಳ ತಪ |
ಅದುಭುತವೆಂಬೆಯಲ್ಲ ||
ಹದನೆಂತು ಪರಿಕಿಪೆ ಕುದಿವ ಗಡ್ಡೋಜರು |
ಬೆದರುವ ಪರಿಯ ನೋಡು || 2 ||
ಸ್ಥೂಲಶಿರಾಶ್ರಮ ಬಾಲಬುದ್ಧಿಯ ತೋರೆ |
ಕಾಲಾಗ್ನಿರುದ್ರನಪ್ಪ ||
ವೇಳೆಯರಿತು ಪಾದಮೂಲದರ್ಶನಗೊಳೆ |
ಬಾಳುವೆ ಭದ್ರವಪ್ಪ || 3 || 23 ||

**ಸುರುಟಿ - ಏಕ**
ನನ್ನಿಯ ಪರಿಕಿಪೆನು | ಕಟ್ಟೆಲ್ಯ |
ಬಣ್ಣದ ವೇಷವನು ||
ಅಣ್ಣರ ನಡುಗಿಸಿ | ಚಿಣ್ಣರ ಬೆದರಿಪೆ |
ಎನ್ನಭಿನಯವೆಂ | ತೆನ್ನುವುದರಿ ನೀ || 1 ||
ಘೋರಾಕಾರದಲಿ | ಬೆದರಿಪ |
ಮೋರೆ ಚಿತ್ರಗೊಳಲಿ ||
ತೋರಗೊಳಿಸುತಾ | ಕಾರವ  ನೀನು |
ಬ್ಬೇರಿಸು ಚಳಕವ | ತೋರಿಸು ಬಣ್ಣದಿ || 2 || 25 ||

**ಕೇದಾರಗೌಳ - ಝಂಪೆ**
ಕಟ್ಟಿಕೊಡುವೆನು ವೇಷವ | ಬಳಿಕದರ |
ಅಟ್ಟುಳಿಯೊಳ್ ಬಹ ದೋಷವ ||
ಕಟ್ಟಿಕೊಳು ನೀನೋರ್ವನೆ | ಋಷಿಕೋಪ |
ವಟ್ಟಿ ತಿಂಬುದು ಗೆಳೆಯನೆ || 1 ||
ನೋಡಿಕೊಳುವೆನು ಬಂದುದ | ಅಳುಕದಿರು |
ಮಾಡು ಕಾರ್ಯವ ಪೇಳ್ದುದ ||
ಮೂಢರಿಂದೇನಪ್ಪುದು | ಗಂಧರ್ವ |
ಮೋಡಿ ಮೋಹಿಸಿ ಕೆಡಿಪುದು || 2 || 27 ||

**ದ್ವಿಪದಿ**
ಕಪ್ಪು ಹಳದಿಯು ಹಸಿರು ಕೆಂಪುಗೆರೆಯೆಳೆದು |
ಒಪ್ಪುವಂದದಿ ಚಿಟ್ಟೆ ರಚಿಸಿ ಮುಖಗೈದು || 1 ||
ಅರಿವೆದುಂಬಿಸಿ ಕಟ್ಟಿ ಜಟ್ಟಿ ಬಾಲ್ಮುಂಡು |
ಹೊರದಗಲೆ ಸೋಗಲೆಯು ಡಾಬು ಕಸೆಗೊಂಡು || 2 ||
ಕೈಕಟ್ಟು ತೋಳ್ಕಟ್ಟು ಭುಜಕೆ ಗಿಳಿ ಇಟ್ಟು |
ಮೆಯ್ಕಟ್ಟನುಬ್ಬಿಸಿದ ಪದಕವೆದೆಗಿಟ್ಟು || 3 ||

ಓಲೆಗಟ್ಟುತ ಚುಟ್ಟಿ ಪಟ್ಟಿ ಮೇಲ್ಕಟ್ಟಿ |
ಆಲಂಬಗೊಳಲಿಟ್ಟ ಕೇಸರಿಯ ತಟ್ಟಿ || 4 || 31 ||

**ಭಾಮಿನಿ**
ಘೋರವೇಷವಗೈದು ನಾರೀ |
ವಾರವನ್ನೊಡಗೊಂಡು ಹಂಸನು |
ಸಾರಿದನು ಗಂಧರ್ವಲೋಕಕೆ ಕಷ್ಟ ಬೇಡೆಂದು ||
ಭಾರಿಯೊಜ್ಜೆಯ ಮಾರುಹೆಜ್ಜೆಯ |
ತೋರಿ ಬಿಜ್ಜೆಯ ಮೀರಿ ಲಜ್ಜೆಯ |
ಸಾರಿದನು ವಿಶ್ವಾವಸುವು ಕೈಮೀರಿದುಜ್ಜುಗನು || 1 || 32 ||

**ವಾರ್ಧಕ**
ನಳನಳಿಸಿ ಬೆಳೆದ ತಂಪೆರೆವ ತರುಲತೆಗಳಿಂ |
ಜುಳುಜುಳಿಪ ನದಿ ಶುಭ್ರಸಲಿಲಪುಷ್ಕರಿಣಿಯಿಂ |
ಕಲರವಂಗಳ ಪಕ್ಷಿ, ಕುಲವೈರವರಿಯದ ಮೃಗಾಳಿಯಿಂ ರಂಜಿಸುತಿಹ ||
ಫಲಪುಷ್ಪಭರಿತಾಶ್ರಮದಿ ಸ್ಥೂಲಶಿರನು ನಿ |
ರ್ಮಲ ಮನೋಬಲದ ಮುನಿವರನು ಶಿಷ್ಯರ್ವೆರಸಿ |
ನೆಲೆಗೊಂಡಿರಲ್ ನಿತ್ಯ ಸತ್ಯಮಂ ಕೀರ್ತಿಸುವ ವೇದವಾಙ್ಮಯವಾರ್ಧಿಯು || 1 || 33 ||

**ಶಂಕರಾಭರಣ - ರೂಪಕ**
ಕಿತ್ತಡಿಗಳ ಕರೆದು ಪೇಳ್ದ |
ಕಿತ್ತು ತನ್ನಿ ಕಂದಮೂಲ |
ಮತ್ತೆ ಹೂವು ಕುಶವು ಸಮಿಧ | ವೆತ್ತಲಿದ್ದರು || 1 ||
ಕತ್ತಿ ಸಲಿಕೆ ಹೂವ ಬುಟ್ಟಿ |
ಎತ್ತಿಕೊಂಡು ವಟುಸಮೂಹ |
ಅತ್ತಲಿತ್ತಲರಸೆ ಕಂಡ | ಮೃತ್ಯುರೂಪನು || 2 || 35 ||

**ಘಂಟಾರವ - ಅಷ್ಟ**
ಭಾರಿ ಗರ್ಜನೆಗೈದು ಘೋರಾಕಾರ |
ತೋರಿ ಕೆಂಗಣ್ಣಲುಗಿಸುತ್ತಲಿ |
ಸಾರಿಯಟ್ಟುತ ಬಂದನು || 1 ||
ಚೀರಿ ಬಾಲರು ಚೆದುರುತ್ತೋಡಿದರೆಲ್ಲ |
ಜಾರಿಬಿದ್ದರು ಮೋರೆ ಪರಚಲು |
ಸೋರೆ ನೆತ್ತರು ಕಾಲೊಳು || 2 ||
ತಟ್ಟಿ ಕೈಗಳನಟ್ಟುತ್ತ ಬಂದನು |
ಅಟ್ಟಹಾಸವಗೈದು ಗುಡುಗುಡು |
ಗುಟ್ಟಿ ತಾನಡಗಟ್ಟಿದ || 3 || 38 ||

**ಕಾಂಬೋಧಿ - ರೂಪಕ**
ಅಡಗಿ ಬಾಲರು | ನಡುಗಿ ಭಯದೊಳು |
ಉಡುಗಿ ಬಂದರು | ಅಡಿಗೆ ಬಿದ್ದರು || 1 ||
ಪಿಡಿದು ನಿಲ್ಲಿಸಿ | ನಡೆದ ಹದನವ |
ನುಡಿಯಿರೇತಕೆ | ನಡುಗುತಿರುವಿರಿ || 2 ||
ಭೂತ ಪ್ರೇತವೊ | ದೈವದಾಟವೊ |
ಭೀತಿಗೊಳಿಸಿದೆ | ಗುರುವೆ ರಕ್ಷಿಸಿ || 3 || 41 ||

**ಸಾಂಗತ್ಯ - ರೂಪಕ**
ಪೇಳಿ ಧೈರ್ಯವ ಮುನಿ ಬಾಲರ ಸಂತೈಸಿ |
ಸ್ಥೂಲಶಿರನು ತನ್ನಂತರದಿ ||
ಆಲೋಚಿಸುತ್ತಲಿ ತಿಳಿದ ಗಂಧರ್ವನು |
ಗೋಳುಗುಟ್ಟಿಸಿದನೆಂಬುದನು || 1 ||
ಅರಸುತ್ತಲಾತನು ಪೊರಟು ಬರಲು ದೊಡ್ಡ |
ಮರದಾಶ್ರಯದೊಳಡಗಿ ||
ಬರಸಿಡಿಲೆರಗಿದೋಲ್ ಬೊಬ್ಬಿಡುತೈತಂದು |
ಅರಚಿದನಪಹಾಸ್ಯಗೈದು || 2 || 43 ||

**ಮಾರವಿ - ಏಕ**
ಛೀ ಕುಹಕಿಯೆ ದಿವಿಜೌಕಸರೊಳಗಿ |
ದ್ದೀ ಕುಟಿಲದ ವೇಷ ||
ಕಾಕುಜನರ ತೆರ ಧರಿಸುತಗೈದೆಯ |
ಪಾಖಂಡಿಯೆ ದೋಷ || 1 ||
ಗಂಧರ್ವನೆ ನೀ ಸೌಂದರ್ಯದ ಮದ |
ದಿಂದೀ ಕೃತಿಗೈದೆ ||
ಹೊಂದೀ ವೇಷವನೆಂದೆಂದಿಗು ಸ್ಥಿರ |
ಮಂದಮತಿಯೆ ಮುಂದೆ || 2 || 45 ||

**ಕೇದಾರಗೌಳ - ಅಷ್ಟ**
ಹಚ್ಚಿದ ಬಣ್ಣವು ಅಚ್ಚಳಿಯದೆ ನಿಂತು |
ಮುಚ್ಚಿತು ದೇಹವನು ||
ಉಚ್ಚತರದ ಕಾಯ ನಷ್ಟವಾದುದ ಕಂಡು |
ಬೆಚ್ಚಿದ ಗಂಧರ್ವನು || 1 ||
ಕೆಡೆದ ಮುನಿಯ ಪಾದದೆಡೆಯಲಿ ದಮ್ಮಯ್ಯ |
ಕಡುಮೂರ್ಖನಾದೆ ನಾನು ||
ನುಡಿಯಿಂದ ಮುನಿರುದ್ರ ಕಡಿಯಬೇಡಯ್ಯಯ್ಯೋ |
ಸುಡಬೇಡ ಕರುಣೆದೋರು || 2 ||
ಸೂರ್ಯಸೋಮರ ತೇಜ ಮೀರಿ ಮೆರೆದ ದಿವ್ಯಾ |
ಕಾರ ವಿಕಾರವಾಯ್ತು ||
ಧೀರಮುನಿಯೆ ದೋಷಕಾರಿಯು ಕ್ಷಮಿಸೆನ್ನ |
ಪಾರುಗೈ ಕರುಣಾಳುವೆ || 3 || 48 ||

**ಭಾಮಿನಿ**
ಅಂತರಂಗದ ದೌಷ್ಟ್ಯ ಬಾಹ್ಯವ |
ನಂತ್ಯಗೊಳಿಸಿತು ಭ್ರಾಂತ ಕೇಳೈ |
ಕಂತುಪಿತ ಶ್ರೀರಾಮನಾಗಿ ವನಾಂತರವ ಚರಿಸೆ ||
ಕಂತಲಾತನ ಖಡ್ಗ ಮೇಣ್ಪುಡೆ |
ಸಂತಸವು ನಿನ್ನಂತರಾತ್ಮಕೆ |
ಬಂತು ದುರಹಂಕಾರವನುಭವಿಸುವುದು ಪೋಗೆಂದ || 1 || 49 ||

**ಸೌರಾಷ್ಟ್ರ - ತ್ರಿವುಡೆ**
ಧರಿಸಿ ಶಾಪವ ದೇಹಧರ್ಮಕೆ |
ಗರುವವೇರೆ ಸುಧರ್ಮ ಸಭೆಗೈ |
ತರುವ ಮನದೊಳಗೇರಿ ಬಂದನು | ಸ್ವರಕೆ ಭರದಿ || 1 ||
ದೇವದೂತರು ತಡೆಯುತೆಂದರು |
ಆವ ರಕ್ಕಸ ನೀನು ನುಗ್ಗುವು |
ದಾವ ಕಡೆ ನಿಲ್ಲಲ್ಲಿ ಧೂರ್ತನೆ | ಠಾವದೆಲ್ಲಿ || 2 || 51 ||

**ಭೈರವಿ - ಏಕ**
ರಕ್ಕಸನೆಂಬಿರೆ ನೀವು | ಸುರ |
ರೊಕ್ಕಲ ವಿಶ್ವಾವಸುವು ||
ತಕ್ಕುದೆ ನಿಮಗೀ ನಡತೆ | ಬಿಡಿ |
ದಿಕ್ಕುವೆ ತೋರ್ದರೆ ಕೊರತೆ || 1 ||
ಬಲ್ಲಿರೆವು ವಿಶ್ವಾವಸುವ | ಅವ |
ನುಳ್ಳವ ಸುಂದರತನುವ ||
ಸುಳ್ಳಿದನೊಡೆಯಗೆ ಪೇಳಿ | ಬಹೆ |
ನಿಲ್ಲೆಲ್ಲ ಕಾಯುತ ಪಾಳಿ || 2 || 53 ||

**ಭೈರವಿ - ಝಂಪೆ**
ಸುರಪಾಲ ಸಂಭ್ರಮದಿ ವಿರಚಿಸಿದನೋಲಗವ |
ಗುರುಧಿಷಣ ದಿಕ್ಪಾಲ ಪರಿವಾರದೊಡನೆ ||
ತರುಣಿಯರ ನಾಟ್ಯ ಮೆರೆದಿರಲು ವೈಭವದಿಂದ |
ಎರಗಿ ದೂತನು ಪೇಳ್ದ ಪೊರಗಿನ ವಿಚಿತ್ರ || 1 || 54 ||

**ಮುಖಾರಿ - ಏಕ**
ಆಲಿಸಬೇಕು ನಮ್ಮೊಡೆಯ |
ಬಹು ಸೋಜಿಗವೆಮ್ಮಯ ದ್ವಾರದಿ ಜೀಯ |
ಆಲಿಸಬೇಕು ನಮ್ಮೊಡೆಯ ||
ಖೂಳದನುಜನು ಕ | ರಾಳಾಕೃತಿಯವ |
ನೋಲಗಿಸಲು ತ | ಮ್ಮಾಲಯ ಪೊಗುತಿರೆ |
ಕೋಲಡಗಟ್ಟುತ | ಕೇಳೆ ವಿಶ್ವಾವಸು |
ವಾಲಿಸಿ ನೀವೆಂ | ದ್ಹೇಳಿದನಾತನು || ಆಲಿಸ || 1 ||
ಅಕರಾಳ ವಿಕರಾಳ ವೇಷ |
ಬಹುಭೀಕರ ರೂಪದಿ |
ಪ್ರಕಟಗೊಂಡಿಹನು ದೇವೇಶ ||
ಮಕುಟವು ವಿಸ್ತರ | ಮುಖವು ಭಯಂಕರ |
ವಿಕಟದ ನುಡಿ ಖಳ | ನಿಕರದೊಳಾವನೊ |
ಯುಕುತಿಯೊಳೈದಿಹ | ನಕಟೇಂಗೈವನೊ || ಆಲಿಸ || 2 || 56 ||

**ಸೌರಾಷ್ಟ್ರ - ತ್ರಿವುಡೆ**
ಕೇಳುತಚ್ಚರಿಯಾಂತು ಸುರಪತಿ |
ತಾಳಿ ದ್ವಾರದೊಳಿರಲಿ ಬಹೆನೆಂ |
ದೋಲಗವ ಬೀಳ್ಕೊಟ್ಟು ಕಂಡ ಕ | ರಾಳಮೊಗನ || 1 ||
ಚಾರರನು ಝುಂಕಿಸಿ ಪಚಾರಿಸಿ |
ದ್ವಾರಕೈದುತಲೊಳ ಪೊಗುವುದೇಂ |
ಘೋರರೂಪನೆ ಅಸುರ ಪೇಳೈ | ಯಾರು ನೀನು || 2 || 58 ||

**ಪಂತುವರಾಳಿ - ಮಟ್ಟೆ**
ಅಸುರನಲ್ಲ ನಾನು ವಿಶ್ವಾ |
ವಸುವು ನಿತ್ಯದಂತೆ ಬಂದೆ |
ವಿಶದವಾಗಿ ಪೇಳ್ದರಿವರು |
ತುಸುವು ನಂಬಲಿಲ್ಲವೆನ್ನ || 1 ||
ನಂಬೆ ನಾನು ಘೋರರೂಪ |
ದಿಂ ಬರಲ್ಕದೇನು ಕತವು |
ಎಂಬುದನ್ನು ಪೇಳ್ ಸುರೂಪ |
ಗೊಂಬುದಕ್ಕದೇನು ಕೊರತೆ || 2 || 60 ||

**ಕಾಂಬೋಧಿ - ಅಷ್ಟ**
ಮುನಿಸ್ಥೂಲಶಿರನನ್ನು ಕೆಣಕಿ | ದುಷ್ಟ |
ತನವ ತೋರ್ದುದರಿಂದ ದುಡುಕಿ ||
ಎನಗಾಯ್ತು ಶಾಪ ಮೋ | ಹನ ಕಾಮರೂಪದ |
ಘನಸಿದ್ಧಿಯುಡುಗೆ ಮು | ನ್ನಿನ ರೂಪ ಪೋದುದು || 1 || 61 ||

**ಕೇದಾರಗೌಳ - ಝಂಪೆ**
ಶಾಪವಿದ್ಧ ಶರೀರವ ಧರಿಸಿರುವ |
ಪಾಪಿ ಪೊಗದಿರು ಸ್ವರ್ಗವ ||
ಪೋಪುದೀಕ್ಷಣ ಪೊಡವಿಗೆ | ಶಿಕ್ಷೆ ಸರಿ |
ರೂಪಮದದಿಂ ಮರೆವಗೆ || 1 || 62 ||

**ಭೈರವಿ - ಏಕ**
ವಿಧಿಯಿಂ ಪಡೆದಿಹೆ ವರವ | ಪೋ |
ಪುದು ಕೇಡೇಂ ಪೇಳ್ ಮಘವ ||
ವಿಧಿಸುತ ಗೈದರವಜ್ಞೆ | ಸುರ |
ಸದನ ಪೊಗುವೆ ಮೀರ್ದಾಜ್ಞೆ || 1 ||
ಮಿತಿ ಬೇಕತಿಯಹಮಿಕೆಗೆ | ಆ |
ಹತಿಯರಿಯದ ದುರ್ಮತಿಗೆ ||
ಹಿತದಿಂ ಪೋಗುವುದೊಳಿತು | ಸುರ |
ತತಿಗಾಗಿಹೆ ನೀ ಹೊರತು || 2 || 64 ||

**ಶಂಕರಾಭರಣ - ಮಟ್ಟೆ**
ಸುರರ ನಗರಿಗಾನು ಹೊರತೆ |
ಉರಿದು ಮೆರೆಯುವೆನ್ನ ಸತ್ತ್ವ |
ಪರಿಕಿಸೀಗಲೆನ್ನುತವನು | ಎರಗಿ ಬಂದನು || 1 ||
ಎತ್ತಿ ವಜ್ರದಿಂದಲವನ |
ನೆತ್ತಿಯನ್ನು ಪೊಯ್ಯೆ ತಲೆಯು |
ಒತ್ತೆ ಹೊಟ್ಟೆಯೊಳಗೆ ಬಿದ್ದ | ತತ್ತರಿಸುತಲಿ || 2 ||
ಖೂಳ ಶಾಪಗೊಂಡ ಮೇಲೂ |
ಕೇಳದಧಮ ಸಾಯೆನುತ್ತ |
ಕಾಲಿನಿಂದ ಚಿಮ್ಮಿ ಪಿಡಿದು | ಗೋಳುಗುಟ್ಟಿದ || 3 || 67 ||

**ನೀಲಾಂಬರಿ - ರೂಪಕ**
ಸಾಯೆನು ಸುರಪತಿ ಕೇಳೆ |
ನ್ಯಾಯುವು ದೀರ್ಘವು ವಿಧಿ ವರ |
ವಾಯಿತು ಶಾಪವು ಕೆಟ್ಟೆನು |
ನೋಯಿಸುತಲಿ ನಿನ್ನ ||
ಕಾಯುವುದೆಂತೀ ಕಾಯವ ಮುಂದೇಂ |
ಗೈಯುವುದರಿಯೆನು ಶ್ರೀನಾ |
ರಾಯಣ ಪೊರೆಯುವನೆಂದಿಹನಾ ಮುನಿ |
ರಾಯನ ನುಡಿ ಪುಸಿಯೆ || 1 || 68 ||

**ವಾರ್ಧಕ**
ಗಂಧರ್ವ ಕೇಳ್ ದೇವಸಂಬಂಧದೊಳಗಿದ್ದು |
ಸುಂದರತೆಯಿಂದುಬ್ಬಿ ಬ್ರಹ್ಮತೇಜಸ್ವಿಗಳ |
ನಿಂದಿಸುತಲಾದ್ಯೆ ಕಬಂಧ ವಜ್ರಾಘಾತದಿಂದ ಕಾಲವ ಕಾಯ್ವುದು ||
ಹೊಂದುವೈ ದೀರ್ಘಬಾಹುವ ಬಂದ ಪ್ರಾಣಿಗಳ |
ಬಂಧಿಸುತ ತಿಂದು ಬದುಕೈ ರಾಮ ಬರುವನಕ |
ಮುಂದೆ ದಿವ್ಯತ್ವಮಂ ಪಡೆವೆ ಪೋಗೆನ್ನುತ್ತ ವಜ್ರದಿಂ ಚಿಮ್ಮಲವನ || 1 || 69 ||

**ಭಾಮಿನಿ**
ಚಾರು ಪಂಪಾಸರಸಿಯುತ್ತರ |
ತೀರದೊಳಗವ ತೂರಿಬಿದ್ದನು |
ಘೋರರೂಪಿಯ ಬಸಿರ ರಂಧ್ರವೆ ಬಾಯಿ ಕಣ್ಣುಗಳು ||
ಸಾರಿಬಹ ಪ್ರಾಣಿಗಳ ನುಂಗಲು |
ಕಾರಡವಿ ನಿರ್ಜನವು ದುರ್ಭರ |
ಸೇರಿ ಬದುಕಿತು ಋಷಿಸಮೂಹ ಮತಂಗಮುನಿವರನ || 1 || 70 ||

**ಶಂಕರಾಭರಣ - ತ್ರಿವುಡೆ**
ದೇವರಘುವರರಾಮ ಲಕ್ಷ್ಮಣ |
ದೇವ ಸಹಿತ ವನಾಂತ ಚರಿಸುತ |
ದೇವಿಯಳ ಹೋಗಾಡಿ ಬಂದರು |
ಸೋವ ಪಿಡಿಯುತ ವಿಪಿನದಿ || ಅರಸಿಯರಸಿ || 1 ||
ತನ್ನನಗಲದೆ ನನ್ನಿಗೋಸುಗ |
ಬೆನ್ನ ಬಿಡದೈತಂದ ನಾರೀ |
ರನ್ನೆಯನು ನೆನೆನೆನೆದು ಮರುಗಿದ |
ಪುಣ್ಯಪುರುಷನು ಗಿರಿವನ || ತಿರುಗಿ ಬಳಲಿ || 2 || 72 ||

**ಮಧ್ಯಮಾವತಿ - ಆದಿ**
ಕಂಡೆಯಾ ತಳಿರೆ ನೀ ಪಲ್ಲವಾಧರೆಯ |
ಕಂಡೆಯಾ ಕೋಗಿಲೆ ಕುಕಿಲಸುಸ್ವನೆಯ |
ಕಂಡೆಯಾ ಕಮಲೆ ಸರೋಜಲೋಚನೆಯ |
ಕಂಡೆಯಾ ಹಂಸೆ ಮರಾಳಗಮನೆಯ || ಕಂಡೆಯಾ || 1 ||
ತಮ್ಮ ನಿನ್ನತ್ತಿಗೆಗಿನ್ನೇನಾಗಿಹುದೊ |
ಎಮ್ಮ ಸಂಕಟ ಜೀವವನ್ನು ಹಿಂಡುವುದೊ |
ನೆಮ್ಮಿ ಬಂದಳಿಗಿಂಥ ದುಮ್ಮಾನಕಿಕ್ಕಿ |
ನಮ್ಮನೀ ಪರಿ ವಿಧಿ ತಿನುವುದು ಮುಕ್ಕಿ || 2 || 74 ||

**ಸೌರಾಷ್ಟ್ರ - ಅಷ್ಟ**
ಗುರುವಸಿಷ್ಠರ ಶಾಸ್ತ್ರ ವಿಶ್ವಾಮಿತ್ರರ ಶಸ್ತ್ರ || ನಿನ್ನದಣ್ಣ || ಜಗ |
ವರಿಯೆ ಭಾರ್ಗವ ರಾಮನಿತ್ತ ವೈಷ್ಣವ ಧನು || ನಿನ್ನದಣ್ಣ || 1 ||
ಶರಭಂಗ ಅತ್ರಿ ಅಗಸ್ತ್ಯ ಸುತೀಕ್ಷ್ಣರ || ಆಸೆಯಣ್ಣ || ನೀನು |
ದುರುಳರ ತರಿಯುತೀ ಧರೆಯ ಪೊರೆವೆಯೆಂಬ || ಆಸೆಯಣ್ಣ || 2 ||
ದಕ್ಷಿಣ ದಿಸೆಯತ್ತ ಸೂಚಿಸುತಿವೆ ಮಾರ್ಗ || ಅಣ್ಣ ದೇವ || ಪ್ರಾಣಿ |
ಪಕ್ಷಿಗಡಣಗಳು ಪೋಗುವ ನಾವತ್ತ || ಅಣ್ಣ ದೇವ || 3 || 77 ||

**ವಾರ್ಧಕ**
ಧರಣಿಜೆಯನರಸುತ್ತ ಮುಂದಕೈತರಲು ಭೀ |
ಕರ ರಣಾಂಗಣದಂತೆ ಕಂಡಿತಾ ಕಾನನವು |
ಮುರಿದು ಬಿದ್ದಿರ್ದ ಧನುಶರ ಸಿತಚ್ಛತ್ರ ರಥ ಮರಣಗೊಂಡಿಹ ಸಾರಥಿ ||
ಪರಿಕಿಸಲ್ ದಿವ್ಯಧನು ವೈದೇಹಿಯನ್ನೊಯ್ದ |
ದುರುಳರೊಳಗಿಲ್ಲಿ ಸಂಘಟಿತವಾಗಿದೆ ಯುದ್ಧ |
ಅರರೆ ನೋಡಣ್ಣ ಭೀಕರ ಯದಾ ಹದ್ದು ಮಲಗಿದಂದದಿ ತೋರ್ಪುದು || 1 || 78 ||

**ಮಾರವಿ - ಏಕ**
ಮಾಯದಿ ಹದ್ದಿನ ಕಾಯವ ಧರಿಸುತ |
ಕಾಯುವನೀ ದನುಜ ||
ಸಾಯಿಸುವೆನು ಮೊದಲೀಯಪಶಕುನವ |
ಸಾಯಕ ತಾರನುಜ || 1 ||
ನಾರೀಚೋರನ ತೀರಿಸಿ ರಣದಲಿ |
ಧಾರಿಣಿಜೆಯ ಮೆದ್ದು ||
ಸೇರಿದೆ ನಿದ್ದೆಗೆ ಘೋರಸ್ವರೂಪಿಯು |
ಕ್ರೂರಿಯು ರಣಹದ್ದು || 2 || 80 ||

**ಕೇದಾರಗೌಳ - ಅಷ್ಟ**
ರಾಮರಾಮಾ ಎಂಬ ಕ್ಷೀಣಧ್ವನಿಯ ಕೇಳಿ |
ಸೌಮಿತ್ರಿ ಬಳಿಗೆ ಬಂದು ||
ಭೀಮಕಾಯದ ಪಕ್ಷಿ ಪಕ್ಷಚ್ಛೇದದಿ ಬಿದ್ದು
ಭೂಮಿಯೊಳುರುಳುತಿರೆ || 1 ||
ಅಣ್ಣ ನೋಡೀ ಹದ್ದು ರೆಕ್ಕೆಯುಡಿದು ಬಿದ್ದು |
ಮಣ್ಣು ನೆತ್ತರೊಳದ್ದಿದೆ ||
ಸಣ್ಣಗುಳಿದು ಪ್ರಾಣ ಕಣ್ಣು ಮೇಲ್ಸಿಕ್ಕಿದೆ |
ನಿನ್ನನೆ ಕರೆಯುತ್ತಿದೆ || 2 || 82 ||

**ಸಾಂಗತ್ಯ - ರೂಪಕ**
ಅರಿತೆನೀತನೆ ಜಟಾಯುವು ಪೂರ್ವಪರಿಚಿತ |
ಅರುಣಪುತ್ರನು ಸಂಪಾತ್ಯನುಜ ||
ದೊರೆದಶರಥಗಾಪ್ತ ಶ್ಯೇನೇಯ ನಿನಗಿಂಥ |
ಪರಿಯಾಯ್ತೇಕೆನ್ನುತಪ್ಪಿದನು || 1 ||
ನೀವಿಲ್ಲದಿಹ ವೇಳೆ ದೇವಿಯರನು ಕದ್ದು |
ರಾವಣನೆಂಬ ರಾಕ್ಷಸನು ||
ಧಾವಿಸುತಿರಲಾಕ್ರಂದನ ಕೇಳುತಡಗಟ್ಟಿ |
ಕಾವ ಭುಮೆಯೊಳು ಹೋರಿದೆನು || 2 || 84 ||

**ಸೌರಾಷ್ಟ್ರ - ತ್ರಿವುಡೆ**
ಆರು ಪೇಳೈ ರಾಕ್ಷಸಾಧಮ |
ಊರು ನೆಲೆಗಳ ತಿಳಿದೆಯೇನೈ |
ವೀರ ನೀ ಧನ್ಯಾತ್ಮನತಿ ಹಿತ | ಕಾರಿಮಿತ್ರ || 1 ||
ರೆಕ್ಕೆಯನು ಕಡಿದಿಕ್ಕುವನಕವು |
ರಕ್ಕಸನ ಸಾಹಸದಿ ತಡೆದೆನು |
ದಕ್ಕಲಿಲ್ಲವು ದೇವಿ ತೆಂಕಣ | ದಿಕ್ಕಿಗೊಯ್ದ || 2 || 86 ||

**ಭಾಮಿನಿ**
ಮಾತು ತೊದಲಿತು ಜೀವ ದೇಹವ |
ಬೀತುಗೊಂಡಿತು ಶಿರವು ಕಂಪಿಸಿ |
ಸೋತು ರಾಮನ ಪದದಿ ಕಾಯವು ಕೆಡೆಯೆ ಖಗಪತಿಯ ||
ಸೀತೆಯೊಯ್ದನ ತಿಳುಹಲುಳಿಯುತ |
ಪುತನಾದ್ಯೆ ಪುಣ್ಯಲೋಕಕೆ |
ನೀ ತೆರಳು ಪಿತೃಸದೃಶನೆನ್ನುತ ಸುರಿಸಿ ದೃಗುಜಲವ || 1 || 87 ||

**ಭೈರವಿ - ಝಂಪೆ**
ಹದ್ದೆ ನೀ ಗೃಧ್ರೇಶ ನಾರಿಚೋರನೊಳ್ ಗೈದು |
ಯುದ್ಧವನು ಪರಕಾರ್ಯಕಾಗಿಯಸುತೊರೆದೆ ||
ಸಿದ್ಧಗೊಳಿಸೈ ಚಿತೆಯನೆಂದನುಜಗೊರೆದವಗೆ |
ಶ್ರದ್ಧೆಯೊಳಗೌರ್ಧ್ವದೇಹಿಕವಿಧಿಯಗೆಯ್ದ || 1 ||
ಹುಡುಕಿ ಮುಂದೈತರಲ್ಕಲ್ಲಯೋಮುಖಿ ದನುಜೆ |
ಗುಡುಗುಡಿಸುತಡಗಟ್ಟೆ ಲಕ್ಷ್ಮಣನು ಮೂಗ ||
ಕಡಿದು ಭಂಗಿಸಲೋಡಿಯಡಗಿದಳು ಬಳಿಕ ಕಾ |
ರಡವಿಯೊಳು ನಡೆದೈದೆ ದಕ್ಷಿಣಾಪಥಕೆ || 2 || 89 ||

**ವಾರ್ಧಕ**
ತೋಳ ಹುಲಿ ಕಾಡ್ಕೋಣ ಕೂಳಾಯ್ತು ರಕ್ಕಸಗೆ |
ತೋಳುನುದ್ದಕೆ ಚಾಚಿ ಸಿಕ್ಕಿದುದ ಮುಕ್ಕುವಂ |
ಆಳುತನ ತಿಂದನ್ನದಂತೆ ಬೆಳೆದುದು ಕೊಬ್ಬಿ ಬೋಳುಬಂಡೆಯ ಮಾಟದಿ ||
ಏಳಲಾರದ ದೇಹಭಾರದಿಂ ಬಿದ್ದಿರುವ |
ಆಲಿಸುವ ಹೊಟ್ಟೆಯೊಳಗಣ ಮೂಗು ಕಿವಿಯಿಂ ಕ |
ರಾಳನರಿತಂ ಮಾನವಾಗಮನದಪರೂಪದಾಹಾರ ದೊರಕಿತೆನುತ || 1 || 90 ||

**ಕಲ್ಯಾಣಿ - ಅಷ್ಟ**
ಸಿಕ್ಕಿತು | ನರಮಾಂಸ ಭೋಜನವಿಂದು | ದಕ್ಕಿತು || ಪ ||
ಹಕ್ಕಿಗೊಂಡಾನಿಲ್ಲಿ ಬರಿ ಕಾ |
ಡ್ಪೆಕ್ಕು ಹುಲಿ ಕೋಣಗಳ ತಿಂದೆನು |
ತೆಕ್ಕೆಯಳವಿಗೆ ಸಿಕ್ಕ ಮನುಜರ |
ಮುಕ್ಕಿ ಮಾಂಸವ ನೆಕ್ಕಿ ರಕುತವ || ಸಿಕ್ಕಿತು || 1 || 91 ||

**ಸೌರಾಷ್ಟ್ರ - ತ್ರಿವುಡೆ**
ದನುಜರಾವಾಸವಿದು ಲಕ್ಷ್ಮಣ |
ವನವು ಭೀಕರವಿಹುದು ಖಡ್ಗವ |
ಧನುಶರಂಗಳನೆಚ್ಚರದಿ ನೀ | ನನುಗೊಳಿಪುದು || 1 ||
ಕರದಿ ಖಡ್ಗವ ಪಿಡಿದು ನಡೆದೈ |
ತರಲು ಸಿಡಿಲಬ್ಬರದ ಬೊಬ್ಬೆಯೊ |
ಳ್ಪುರುಬಿ ಪಿಡಿದನು ನೀಳ ತೋಳ್ ವಿ | ಸ್ತರಿಸಿ ಖಳನು || 2 || 93 ||

**ಸಾವೇರಿ - ಆದಿ**
ಆವ ಮೂಲದ ತೋಳಿದು | ಅಗ್ರಜ ನಮ್ಮ |
ಪ್ರಾಣದಿಂ ಸೆಳೆಯುವುದು ||
ಈ ವಿಚಿತ್ರವ ಗೆಲಿದು | ಜೀವಿಪುದೆಂತು |
ಆವುಪಾಯವು ಕಾಣದು || 1 ||
ಹೇಗಾದರಣ್ಣ ನೀನು | ತಪ್ಪಿಸಿಕೊಳ್ಳು |
ಆಗುವೆ ಬಲಿಯು ನಾನು ||
ಬೇಗತ್ರಿಗೆಯನರಸು | ದುಷ್ಟರ ಕೊಂದು |
ಸಾಗು ನೀನಾಗರಸು || 2 || 95 ||

**ಶಂಕರಾಭರಣ - ಏಕ**
ಬೆದರಬೇಡ ತಮ್ಮ ಧೈರ್ಯ |
ಕೊದಗುವುದು ಸಕಾಲಸ್ಫುರಣ |
ವಿದರಮೂಲ ಮೊದಲು ತಿಳಿಯು | ವುದು ವಿವೇಕವು ||
ವಿಧಿಯು ಕರದ ಖಡ್ಗ ಪೌರು |
ಷದಲಿ ಬದುಕು ಸಿದ್ಧನಾಗು |
ಸದೆವ ಖಳನ ತೋಳ ಕಡಿಯೆ | ಪದುಳವಪ್ಪುದು || 1 || 96 ||

**ಸೌರಾಷ್ಟ್ರ - ತ್ರಿವುಡೆ**
ಅರರೆ ಮಾನವ ರಕ್ತಮಾಂಸವು |
ದೊರಕಿತಿಂದಿಗೆ ನಿಮಗೆ ಮೃತ್ಯುವು |
ಬರಿದೆ ನೋಯಿಸೆನೊಂದೆ ತುತ್ತಿಗೆ | ಸರಿಯು ನೀವು || 1 ||
ಬೊಬ್ಬಿರಿದು ಸೆಳೆಯಲ್ಕೆ ಸನ್ನೆಯೊ |
ಳಿಬ್ಬರೊಂದೇ ಘಾತವಿಕ್ಕಲು |
ಕೊಬ್ಬುದೋಳಿಂದುಗಲು ನೆತ್ತರು | ದಬ್ಬ ದಬ್ಬ || 2 ||
ಚೀರಿ ಬಿದ್ದನು ಧರಣಿ ಕಂಪಿಸೆ |
ಧೀರ ನಡೆಯಿಂ ಬಹರನೀಕ್ಷಿಸಿ |
ಕಾರಣಿಕರೆಂದರಿತು ಮನದಿ ವಿ | ಚಾರಿಸಿದನು || 3 || 99 ||

**ದೇಶಿ - ಅಷ್ಟ**
ಆರಯ್ಯ | ನೀವು | ಆರಯ್ಯ || ಪ ||
ಆರು ಸಿಕ್ಕಿದರೆನ್ನ ತೋಳತೆಕ್ಕೆಯಲಿ |
ಹಾರಿ ಪೋಪುದು ಜೀವ ಧೀರರೆ ಪೇಳಿ || ಆರಯ್ಯ || ಅ. ಪ. ||
ಕ್ರೂರಪ್ರಾಣಿಗಳ ಸಜೀವದಿಂ ಮುಕ್ಕಿ |
ಘೋರಾಕಾರದಿ ದೇಹ ಬೆಳೆದಿದೆ ಸೊಕ್ಕಿ |
ಪಾರುಷ್ಯದದ್ಭುತ ಕೂರಸಿಗಡಿತ |
ವೀರರೆ ಮನುಜರಲ್ಲವು ನೀವು ಖಚಿತ || ಆರಯ್ಯ || 1 || 100 ||

**ಕಾಂಬೋಧಿ - ಝಂಪೆ**
ದಾಶರಥಿ ಶ್ರೀರಾಮನೀತ ಲಕ್ಷ್ಮಣನು ನಾ |
ಕೋಸಲೇಂದ್ರಾತ್ಮಜರು ವನದಿ ||
ವಾಸವಿರೆ ದೇವಿ ಸೀತೆಯನೊಯ್ದ ರಾವಣನ |
ದೇಶವನ್ನರಸಿ ಪೊರಟಿಹೆವು || 1 || 101 ||

**ಭಾಮಿನಿ**
ರಾಮನೆಂಬ ಸುನಾಮವಾಲಿಸಿ |
ತಾಮಸವು ಕರಗಿದುದು ಮುನಿ ಸು |
ತ್ರಾಮರೆಂದಾ ಮಾತು ಮನದಲಿ ಮೂಡಿ ಮರುಕಳಿಸೆ ||
ಈ ಮಹಿಮನೇ ಶ್ರೀಮನೋಹರ |
ಸ್ವಾಮಿ ಪ್ರಭು ಶ್ರೀರಾಮ ನೀ ಬಂ |
ದೈ ಮಹಾವಿಭುವಾದಿನಾರಾಯಣನೆ ಪೊರೆ ಹರಿಯೆ || 1 || 102 ||

**ಆನಂದಭೈರವಿ - ಆದಿ**
ಎರಗಲಾರೆನು ಪ್ರಭುವೇ | ಕೈ ಮುಗಿವರೆ |
ಕರವಿಲ್ಲವೈ ವಿಭುವೆ ||
ಶಿರವ ಬಾಗುವೆನೆಂದ |
ರುರದೊಳಗಿದೆ ಜೀವ |
ತೊರೆಯಲಾರದ ವರ |
ಉರಿಯ ಸಹಿಸಲಾರೆ || ಎರಗ || 1 ||
ಆರಯ್ಯ ದೀರ್ಘದೇಹಿ | ಎಮ್ಮನು ಕಂಡು |
ಈ ರೀತಿ ನುಡಿವೆ ನೇಹಿ ||
ಘೋರರೂಪಕು ಶುದ್ಧಾ |
ಚಾರದೀ ಮಾತಿಗು |
ಭಾರಿಯಂತರವಿದೆ |
ಸೇರದೊಂದೊಂದನು || ಆರಯ್ಯ || 2 || 104 ||

**ಭಾಮಿನಿ**
ರೂಪಮದದಿಂ ಸ್ಥೂಲಶಿರಮುನಿ |
ಶಾಪಭಾಜನ ಶಿರವನಿಂದ್ರನು |
ಕೋಪದಿಂ ಪವಿಯಿಂದ ಪೊಯ್ಯಲು ಪೊಕ್ಕುದುದರವನು ||
ಶ್ರೀಪತಿಯು ಕಡಿದುರಿಸೆ ದೇಹವ |
ಪಾಪನಾಶ ವಿಶಾಪವೆಂದಿಹ |
ತಾಪಸನ ನುಡಿ ಸತ್ಯ ವಿಶ್ವಾವಸುವು ಗಂಧರ್ವ || 1 || 105 ||

**ಕೇದಾರಗೌಳ - ಅಷ್ಟ**
ರಾವಣನೆಂಬ ನಿಶಾಚರ ಸೀತೆಯ |
ನಾವಿಲ್ಲದಿರಲೊಯ್ದನು |
ತಾವ ಬಲ್ಲೆಯ ನೀನು ನಾವೆತ್ತ ಪೋದರೆ |
ದೇವಿ ಸಿಗುವಳೆಂಬುದ || 1 ||
ಸಿದ್ಧ ಪೋಗಿದೆ ನಾ ಕೃತ್ಯಾರ್ಥನಾದಾಗಲೆ |
ಉದ್ಧರಿಸುವುದು ಸುಟ್ಟು ||
ಶುದ್ಧನಾಗುತ ಮೂಲರೂಪದಿಂದೊರೆವೆನು |
ಕದ್ದವನೂರ ಗುಟ್ಟು || 2 || 107 ||

**ಕಂದ**
ಒಟ್ಟುತ ಕಾಷ್ಠವ ಕಮರಿಯೊ |
ಳಿಟ್ಟಾತನ ದೇಹ ವಹ್ನಿಗರ್ಪಿಸಲೆದ್ದಂ ||
ದಿಟ್ಟಿಸಿ ಧನ್ಯನು ತಾನೆಂ |
ದೊಟ್ಟೈಸುವ ಭಾವಸಹಿತ ಹಿತದಿಂದೆಂದಂ || 1 || 108 ||

**ಮೋಹನ - ಅಷ್ಟ**
ರಾಮ ಮನೋಭಿರಾಮ | ಸಜ್ಜನ ಪ್ರೇಮ |
ಸ್ವಾಮಿ ವೈಕುಂಠಧಾಮ ||
ಭೂಮಿಯ ಕ್ಷೇಮದಿಂ ಪ್ರಾರ್ಥಿಸೆ ಋಷಿಗಣ |
ನೇಮ ಶಿರದೊಳಾಂತ ಭೂಮಿಜಾರಮಣ || 1 ||
ಸುಗ್ರೀವ ಸೂರ್ಯಸಂಜಾತ | ಗೋಲಾಂಗೂ |
ಲಾಗ್ರಣಿ ಹನುಮಾದ್ಯರ್ ಸಹಿತ ||
ಅಗ್ರಜ ವಾಲಿಯಟ್ಟುಳಿಗಂಜಿ ಋಷ್ಯಮೂ |
ಕಾಗ್ರದೊಳಿಹ ಸಖ್ಯ ಸೌಖ್ಯಮಪ್ಪುದು ಮುಂದೆ || 2 || 110 ||

**ಮಧುಮಾಧವಿ - ತ್ರಿವುಡೆ**
ವಾಲಿಯನು ನಿಗ್ರಹಿಸೆ ಗೋಲಾಂ |
ಗೂಲಬಲ ನಿನಗೊದಗಿ ಬರುವುದು |
ಖೂಳ ರಾವಣನಿರವು ತಿಳಿವುದು |
ಮೇಲೆ ಸೀತೆಯ ಪಡೆವಿರಿ || 1 ||
ಪಾವನನು ನಾ ಪರಮಪುರುಷನೆ |
ಕಾವುದೆಂದರಗುತ್ತಲಾ ವಿ |
ಶ್ವಾವಸುವು ಗಮಿಸಿದನು ಗಂಧ |
ರ್ವಾವನಿಗೆ ಬೀಳ್ಕೊಳ್ಳುತ || 2 || 112 ||

**ಭಾಮಿನಿ**
ಬಳಿಕವರು ಕಾದಿರುವ ಶಬರಿಯ |
ಎಲೆಮನೆಗೆ ಬರೆ ತೋಷಭರದಿಂ |
ಗಳಿತ ಫಲವನ್ನಿತ್ತು ಪಡೆದಳು ಮೋಕ್ಷಸತ್ಫಲವ ||
ಕಳೆದು ಬಹುಕಾನನವ ಪಂಪಾ |
ಸಲಿಲ ತೀರದೊಳಾಂಜನೇಯಂ |
ಗೊಲಿದು ಸಾರ್ದರು ಋಷ್ಯಮೂಕಕೆ ಸೂರ್ಯಸುತನೆಡೆಗೆ || 1 || 113 ||

**ಮಂಗಲ :**
**ಸಾಂಗತ್ಯ - ರೂಪಕ**
ತರಣಿ ವಂಶದಿ ಪೊಟ್ಟಿ ಧರಣಿಭಾರರ ಮೆಟ್ಟಿ |
ಶರಧಿಗೆ ಸೇತುವೆ ಕಟ್ಟಿ ||
ತಿರೆಯ ಸಿರಿಯ ಸುಖ ಸಾಮ್ರಾಜ್ಯ ಮೆರೆಸಿದ |
ದೊರೆರಾಮಗೊರೆವೆ ಮಂಗಲವ || 1 || 114 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಉಡುಪಿ ಯಕ್ಷಗಾನ ಕೇಂದ್ರ

**ಪ್ರಸಂಗ ಪ್ರತಿ ಆಧಾರ:** ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀನಿಧಿ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ